**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 3613/2023 ಸಿ.ಡಬ್ಲ್ಯೂ-13 ಪಿ.ಡಬ್ಲ್ಯೂ-9

| | | |
|---|---|---|
| ಹೆಸರು | ಃ | ತಿರುಮಲೇಶ |
| ತಂದೆ:ಗಂಡ | ಃ | ನರಸಿಂಹ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | : | ಪಿ.ಎಸ್.ಐ ವಾಡಿ |
| ವಾಸಸ್ಥಳ | ಃ | ವಾಡಿ |

ದಿನಾಂಕಃ 31.10.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ದಿಃ 20-01-2022 ರಿಂದ ದಿಃ 30-07-2023 ಇಲ್ಲಿಯವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 10-04-2023 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ಪರಿಶೀಲನೆ ಮಾಡಿ ಆರೋಪಿತರ ಪತ್ತೆ ಕುರಿತು ಚಾಸಾ 10 ರವರ ಕಡೆಯಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ ದಿಃ 30-04-2023 ಚಾಸಾ 1, 4 ರಿಂದ 6 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 06-05-2023 ರಂದು ಆರೋಪಿತರ ಪತ್ತೆ ಕುರಿತು ಚಾಸಾ 10 ರವರ ಕಡೆಯಿಂದ ಮತ್ತೊಂದು ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣ ಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತೇನೆ.

ಸಾಕ್ಷಿಯು ನಿಪಿ. 3 ರಿಂದ 6 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿಪಿ. 3ಬಿ, 4ಬಿ, 5ಬಿ ಮತ್ತು 6ಬಿ ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 7 ಮತ್ತು ನಿಪಿ. 8 ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ್ ಎಸ್ ಸಿ ವಕೀಲರಿಂದಃ**

ನನಗೆ ನ್ಯಾಯಾಲಯದಲ್ಲಿ ಇರುವ 1 ನೇ ಆರೋಪಿಯ ಪರಿಚಯ ಇರುತ್ತದೆ. ಸಾಕ್ಷಿಯು ಮುಂದುವರೆದು ಅವರು ನಿವೃತ್ತ ಎ.ಎಸ್.ಐ ಅಂತಾ ನುಡಿಯುತ್ತಾರೆ. ಸದರಿ ಅವರಿಗೆ ಕಾನೂನಿನ ಅರಿವು ಇರುತ್ತದೆ ಎಂದರೆ ಸರಿ. ಸದರಿರವರು ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳುವ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸಂದರ್ಭಕ್ಕೆ ತಕ್ಕಂತೆ ಆಗಿರಬಹುದು ಅಂತಾ ನುಡಿಯುತ್ತಾರೆ. ತನಿಖೆ ಪೂರ್ಣ ಆಗಿಲ್ಲವಾದರೆ ಅಂತಿಮ ವರದಿಯು ಅಪೂರ್ಣಗೊಳ್ಳುತ್ತದೆ ಎಂದರೆ ಸರಿ. ಅಪೂರ್ಣಗೊಂಡ ಅಂತಿಮ ವರದಿಯು ಸಂಶಯವನ್ನು ಸೃಷ್ಟಿ ಮಾಡುತ್ತದೆ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ ನಮೂದಿಸಿದ ಎಲ್ಲಾ ಅಪರಾದಗಳು ಸಜ್ಞೆಯ ಅಪರಾದಗಳು ಎಂದರೆ ಸರಿ. ಎಲ್ಲಾ ಅಪರಾದಗಳಿಗೆ 7 ವರ್ಷಕ್ಕಿಂತ ಕಡಿಮೆ ಶಿಕ್ಷೆ ಇರುತ್ತದೆ ಎಂದರೆ ಸರಿ. ಸದರಿ ಅಪರಾದಗಳ ಮೇಲೆ ಪ್ರ.ವ.ವ.ವರದಿ ದಾಖಲಾದ ನಂತರ ಆರೋಪಿತರಿಗೆ ಕಲಂ 41 ಎ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಬೇಕಾಗುತ್ತದೆ ಎಂದರೆ ಸರಿ. ಕಲಂ 41 ಎ ಸಿ.ಆರ್ ಪಿ.ಸಿಯನ್ನು ಪಾಲಿಸದೇ ಇದ್ದರೇ ಅಂತಿಮ ವರದಿಯು ಸಂಶಯಾತಿತವಾಗುತ್ತದೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಕಲಂ 41 ಎ ಅಡಿಯಲ್ಲಿ ನೀಡಿದ ನೋಟಿಸು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆರೋಪಿಯ ತಪ್ಪಿ ಸಿಕೊಂಡು ಹೋಗಿದ್ದ ಕಾರಣ ಅಪ್ಸಕೋಡಿಂಗ್ ಚಾರ್ಜ ಶೀಟನ್ನು ಸಲ್ಲೀಸಿರುತ್ತೇವೆ ಎಂದು ನುಡಿಯುತ್ತಾರೆ. ಅಂತಿಮ ವರದಿಯಲ್ಲಿ ಎಲ್ಲಿಯೂ ಆರೋಪಿತರಿಗೆ 41 ಎ ಅಡಿಯಲ್ಲಿ ನೀಡಿದ ನೋಟಿಸಿನ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ನಮ್ಮ ಸಿಬ್ಬಂದಿ ಚಾಸಾ 10 ರವರು ನೀಡಿದ ವರದಿ ಆಧಾರದ ಮೇಲೆ ಅಪ್ಸಕೋಡಿಂಗ್ ಚಾರ್ಜ ಶೀಟನ್ನು ಸಲ್ಲಿಸಿರುತ್ತೇನೆ. ನಾನು ಸದರರಿಯವರಿಗೆ ಮೌಖಿಕ ಆದೇಶ ನೀಡಿರುತ್ತೇನೆ. ತನಿಖಾ ಕಾಲದಲ್ಲಿ ಯಾವುದಾದರೂ ಕೆಲಸವನ್ನು ಒಬ್ಬ ಸಿಬ್ಬಂದಿಗೆ ವಹಿಸಿಕೊಟ್ಟಾಗ ಅದನ್ನು ನಮ್ಮ ಠಾಣೆಯ ರಿಜಿಸ್ಟರನಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ನಾನು ಚಾಸಾ 10 ರವರಿಗೆ ಮಾಡಿದ ಆದೇಶದ ಬಗ್ಗೆ ಅಂತಿಮ ವರದಿಯಲ್ಲಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಸದರಿಯವರು ಆದೇಶದ ಪಡೆದ ನಂತರ ಎಲ್ಲಾ ಕಡೆಗೆ ಹೋಗಿ ವಿಚಾರಣೆ ಮಾಡಿ ವರದಿ ಸಲ್ಲಿಸಬೇಕು ಎಂದರೆ ಸರಿ. ಮೊದಲಿಗೆ ಆರೋಪಿಯ ಮನೆಯಲ್ಲಿ ಪರಿಶೀಲನೆ ಮಾಡಬೇಕು

ಎಂದರೆ ಸರಿ. ಚಾಸಾ 10 ರವರು ಅವರ ಸಾಕ್ಷಿಯಲ್ಲಿ ಅವರು ಆರೋಪಿಯ ಮನೆಗೆ ಭೇಟಿ ಕೊಟ್ಟಿಲ್ಲ ಅಂತಾ ಸಾಕ್ಷಿ ನುಡಿದಿದ್ದಾರೆ ಎಂದರೆ ಸಾಕ್ಷಿಯು ನಾನು ಕೇವಲ ಅವರ ಕಡೆಯಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ವರದಿಗಳಾದ ನಿಪಿ. 7 ಮತ್ತು 8 ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಆದಕಾರಣ ಸದರಿ ವರದಿಗಳು ಅಂತಿಮ ವರದಿಯ ಭಾಗ ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ. 7 ಮತ್ತು 8 ರಲ್ಲಿ ಚಾಸಾ 10 ರವರು ಆರೋಪಿತರ ಮನೆಗೆ ಹೋಗಿ ವಿಚಾರಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು ವಿಳಾಸದಲ್ಲಿ ಹಾಜರು ಇರುವುದಿಲ್ಲ ಅಂತಾ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 4 ರವರು ಅವರ ಪಾಟೀ ಸವಾಲಿನಲ್ಲಿ ‘‘ನಾನು ಮೊಬೈಲ್‌ನಲ್ಲಿ ಸದರಿ ಘಟನೆ ನಡೆದುದ್ದನ್ನು ತೋರಿಸಿದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ ಮತ್ತು ಸದರಿ ಘಟನೆಯ ವಿಡಿಯೋ ರೆಕಾರ್ಡ್ ಚಾಸಾ 7 ರವರ ಮೋಬೈಲ್‌ಗೆ ಬಂದಿತ್ತು ನಾನು ಅದನ್ನು ಪೋಲಿಸರಿಗೆ ಸೀಡಿಯನ್ನು ಮಾಡಿ ಕೊಟ್ಟಿರುತ್ತೇನೆ ” ಅಂತಾ ಹೇಳಿದ್ದು ಸದರಿ ಮೊಬೈಲ್ ರೆಕಾರ್ಡಿಂಗನ್ನು ನೀವು ತನಿಖೆಯಲ್ಲಿ ಅಳವಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಅಂತಾ ನುಡಿಯುತ್ತಾರೆ.

ದೂರಿನಲ್ಲಿ ಪಿತ್ರಾರ್ಜಿತ ಆಸ್ತಿಯ ಸಂಬದವಾಗಿ ತಕರಾರು ಇದ್ದು, ಆಳಂದ ನ್ಯಾಯಾಲಯದಲ್ಲಿ ದಾವೆ ಇರುತ್ತದೆ ಅಂತಾ ನಮೂದು ಇದ್ದು ಸದರಿ ದಾವೆಯು ಯಾವ ಸರ್ವೆ ನಂಬರಗೆ ಸಂಬದಿಸಿದ್ದು ಇದ್ದು ನಾನು ಅಂತಿಮ ವರದಿಯಲ್ಲಿ ನಮೂದಿಸಿರುವುದಿಲ್ಲ. ಅಂತಿಮ ವರದಿಯ ಜೊತೆಗೆ ಸದರಿ ಸರ್ವೆ ನಂಬರನ ದಾಖಲೆ ಮತ್ತು ನ್ಯಾಯಾಲಯದ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. 1 ನೇ ಆರೋಪಿಯು ಈ ಪ್ರಕರಣ ಆಗುವುದಕ್ಕಿಂತ ಮುಂಚಿತವಾಗಿ ಈ ಪ್ರಕರಣದಲ್ಲಿ ಇರುವ ಚಾಸಾ 1, 5 ಮತ್ತು 6 ರವರ ವಿರುದ್ದ ದೂರನ್ನು ಸಲ್ಲಿಸಿದ್ದು ಅದು ಗುನ್ನಾ ಸಂಖ್ಯೆ 19/2023 ಅಂತಾ ದಾಖಲಾಗಿರುತ್ತದೆ ಎಂದರೆ ನನಗೆ ನೆನಪು ಇಲ್ಲ. ಆರೋಪಿತರಿಗೂ ಈ ಘಟನೆಗೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹಿತ ನಾನು ಚಾಸಾ 1, 5 ಮತ್ತು 6 ರವರ ಮಾತು ಕೇಳಿಕೊಂಡು ನಮ್ಮ

ಸಿಬ್ಬಂದಿಯೊಂದಿಗೆ ಶಾಮಿಲಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿಃ 20-01-2022 ರಿಂದ ದಿಃ 30-07-2023 ಇಲ್ಲಿಯವರೆಗೆ ಆಳಂದ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಂತಾ ಕಾರ್ಯ ನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 10-04-2023 ರಂದು ಚಾಸಾ 12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು, ಪರಿಶೀಲನೆ ಮಾಡಿ ಆರೋಪಿತರ ಪತ್ತೆ ಕುರಿತು ಚಾಸಾ 10 ರವರ ಕಡೆಯಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ದಿಃ ದಿಃ 30-04-2023 ಚಾಸಾ 1, 4 ರಿಂದ 6 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 06-05-2023 ರಂದು ಆರೋಪಿತರ ಪತ್ತೆ ಕುರಿತು ಚಾಸಾ 10 ರವರ ಕಡೆಯಿಂದ ಮತ್ತೊಂದು ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ತನಿಖೆ ಪೂರ್ಣ ಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ